ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

ಚುಕ್ಕೆ ರಹಿತ ಪ್ರಶ್ನೆ

ದಿನಾಂಕ : 25-03-2021 ಪ್ರಶ್ನೆ ಸಂಖ್ಯೆ : 1859 (2150)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರ ನೀಡಬೇಕಾದ ದಿನಾಂಕ : 25-03-2021

ಉತ್ತರಿಸುವ ಸಚಿವರು: ಸಣ್ಣ ನೀರಾವರಿ ಸಚಿವರು

ವಿಷಯ : ಕೆರೆ ತುಂಬಿಸುವ ಯೋಜನೆ ಕುರಿತು

(ಅ) ಕಳೆದ 5 ವರ್ಷಗಳಲ್ಲಿ ಕೆರೆ ತಂಬಿಸುವ ಯೋಜನೆಯ ಅನ್ವಯ ಸರ್ಕಾರ ವೆಚ್ಚ ಮಾಡಿರುವ ಮೊತ್ತ ಎಷ್ಟು ; (ಜಿಲ್ಲಾವಾರು ನದಿ ಪಾತ್ರವಾರು ವಿವರ ನೀಡುವುದು)

(ಆ) ಕಳೆದ ಐದು ವರ್ಷಗಳಲ್ಲಿ ಕೆರೆ ತುಂಬಿಸುವ ಯೋಜನೆಯ ಅನ್ವಯ ಎಷ್ಟು ಕಿ.ಮೀ. ನಾಲೆಗಳನ್ನು ನಿರ್ಮಾಣ ಮಾಡಲಾಗಿದೆ; (ಈ ನಾಲೆಗಳನ್ನು ನಿರ್ಮಿಸುವ ಇಂಜಿನಿಯರ್ ಮತ್ತು ಗುತ್ತಿಗೆದಾರರ ವಿವರ ನೀಡುವುದು)

(ಇ) ಯಾವ ಯಾವ ನದಿಗಳಿಂದ ನೀರನ್ನು ಬಸಿದು ಕೆರೆ ತುಂಬಿಸುವ ಯೋಜನೆ ಜಾರಿಗೊಳಿಸಲಾಗಿದೆ ; ಜಿಲ್ಲಾವಾರು ನಿರ್ಮಾಣವಾರು ನಾಲೆಗಳವಾರು ವಿವರ ನೀಡುವುದು; ಸದರಿ ನಾಲೆಗಳ ಮೂಲಕ ಯಾವ ನದಿಯಿಂದ ಯಾವ ಕೆರೆಗೆ ನೀರು ಹರಿಸಲು ಉದೇಶಿಸಲಾಗಿತ್ತು ; (ಯೋಜನಾ ವೆಚ್ಚದೊಂದಿಗೆ ವಿವರ ನೀಡುವುದು)

(ಈ) 2016-17 ಮತ್ತು 2017-18 ಸಾಲಿನಲ್ಲಿ ಕೆರೆ ತುಂಬಿಸುವÀ ಯೋಜನೆಯಿಂದ ಎಷ್ಟು ಕೆರೆಗಳಿಗೆ ನೀರನ್ನು ತುಂಬಲಾಗಿದೆ ; (ಜಿಲ್ಲಾವಾರು ವಿವರ ನೀಡುವುದು)

(ಉ) ಕೆರೆ ತುಂಬುವ ಯೋಜನೆಯಲ್ಲಿ ನಿರ್ಮಾಣಗೊಂಡ ನಾಲೆಗಳ ವಾರ್ಷಿಕ ನಿರ್ವಹಣಾ ವೆಚ್ಚವೆಷ್ಟು ; ಈ ನಿರ್ವಹಣೆಯನ್ನು ಯಾವ ಯಾವ ಗುತ್ತಿಗೆದಾರರು ನಿರ್ವಹಿಸುತ್ತಿದ್ದಾರೆ ? (ಜಿಲ್ಲಾವಾರು ವಿವರ ನೀಡುವುದು)